ಓ.ಎಸ್.ನಂ.200/2018

ಪಿ.ಡಬ್ಲ್ಯು:1

**ದಿನಾಂಕ:26.10.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲು: 2ನೇ ಪ್ರತಿವಾದಿ ಪರ ಶ್ರೀ.ಡಿ.ಎನ್.ಪಿ. ವಕೀಲರಿಂದ:</u>**

ನನ್ನ ವಿರುದ್ಧ ಮತ್ತು 2ನೇ ಪ್ರತಿವಾದಿ ವಿರುದ್ಧ ಪ್ರತಿವಾದಿಗಳು ಅಸಲು ದಾವಾ ಸಂಖ್ಯೆ.268/2012 ರಂತೆ 2ನೇ ಹೆಚ್ಚುವರಿ ನ್ಯಾಯಾಲಯ, ಕಡೂರಿನಲ್ಲಿ ಒಂದು ದಾವೆ ದಾಖಲು ಮಾಡಿದ್ದರು ಅಂದರೆ ಸರಿ. ಸದರಿ ದಾವೆಯಲ್ಲಿ ನಾವು ಪ್ರತಿವಾದ ಪತ್ರ ಸಲ್ಲಿಸಿ, ಈ ದಾವೆಯ ಆಸ್ತಿಯ ಕುರಿತಂತೆ ತಿಳಿಸಿದ್ದೇವೆ ಅಂದರೆ ಸರಿ. ಸದರಿ ಅಸಲು ದಾವಾ ಸಂಖ್ಯೆ.268/2012 ರ ದಾವೆಯು ಪ್ರತಿವಾದಿಗಳ ಪರ ಡಿಕ್ರಿಯಾಗಿರುತ್ತದೆ ಅಂದರೆ ಗೊತ್ತಿಲ್ಲ. ಸದರಿ ತೀರ್ಪಿನ ವಿರುದ್ಧ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯ, ಕಡೂರು ರವರಲ್ಲಿ ಆರ್.ಎ.68/2015 ರಂತೆ ಮೇಲ್ಮನವಿ ಸಲ್ಲಿಸಿದ್ದೇವೆ ಅಂದರೆ ಸರಿ. ಸದರಿ ಮೇಲ್ಮನವಿ ವಜಾಗೊಂಡಿದೆ ಅಂದರೆ ಸರಿ. ಸದರಿ ಮೇಲ್ಮನವಿ ತೀರ್ಪಿನ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವೆ ಅಂದರೆ ಸರಿ. ನಾನು ಶಶಿಶೇಖರ್ ಅವರಿಂದ ಖರೀದಿ ಮಾಡಿದ ನಿವೇಶನದ ಅಸೆಸ್ಮೆಂಟ್ ಸಂಖ್ಯೆ.6496/5601/20 ಅಂದರೆ, ಸಾಕ್ಷಿಯು ಸೈಟ್ ನಂಬರ್.20 ಎಂದು ನುಡಿಯುತ್ತಾರೆ. ಸದರಿ ನಿವೇಶನ ಇರುವ ಬಡಾವಣೆಯಲ್ಲಿ ಪುರಸಭೆಯವರು 60 ರಿಂದ 80 ನಿವೇಶನಗಳನ್ನು ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ನಿವೇಶನ ಸಂಖ್ಯೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳ ನಿವೇಶನ ಸಂಖ್ಯೆ.89 ಅಂದರೆ, ಸಾಕ್ಷಿಯು ಅಲ್ಲಿ ನಿವೇಶನವೇ ಇಲ್ಲ ಎಂಬುದಾಗಿ ನುಡಿಯುತ್ತಾರೆ. ನಕ್ಷೆಯಂತೆ ನನ್ನ ನಿವೇಶನ ಮತ್ತು ಪ್ರತಿವಾದಿಗಳಿಗೆ ಸೇರಿದ ನಿವೇಶನ ಸಂಖ್ಯೆ.89 ಅಜಗಜಾಂತರ ದೂರ ಇದೆ ಅಂದರೆ ನನಗೆ ಗೊತ್ತಿಲ್ಲ.

ನಾನು ನಿವೇಶನ ಖರೀದಿ ಮಾಡಿರುವ ಶಶಿಶೇಖರ್ ಅವರು ಅವರ ನಿವೇಶನವನ್ನು ನನಗೆ ತೋರಿಸದೇ ಪ್ರತಿವಾದಿಗಳ ಪಕ್ಕದ ನಿವೇಶನವನ್ನು ತೋರಿಸಿ ಮಾರಾಟ ಮಾಡಿದ್ದಾರೆ ಅಂದರೆ, ಸಾಕ್ಷಿಯು ಶಶಿಶೇಖರ್ ಅವರ ಆಸ್ತಿಯು ಆಶ್ರಯ ಮನೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಕಾರಣದಿಂದಲೇ ನಾವು ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇವೆ ಎಂದು ಪ್ರತಿವಾದಿಗಳು ನಮ್ಮ ವಿರುದ್ಧ ಅಸಲು ದಾವಾ

ಸಂಖ್ಯೆ.268/2012 ನ್ನು ದಾಖಲು ಮಾಡಿದ್ದರು ಅಂದರೆ ಸರಿಯಲ್ಲ. ನಿಪಿ-15 ದಾವಾ ಆಸ್ತಿಗೆ ಸಂಬಂಧಿಸಿದ್ದಲ್ಲ ಅಂದರೆ ಸರಿಯಲ್ಲ. ಶಶಿಶೇಖರ್ ರವರಿಗೆ ಸೇರಿದ ಆಸ್ತಿ ಮತ್ತು ಪ್ರತಿವಾದಿಗಳ ಆಸ್ತಿ ಅಕ್ಕ-ಪಕ್ಕದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಶಶಿಶೇಖರ್ ಅವರು ಕೊಟ್ಟ ಜಾಗದಲ್ಲಿ ನಾವಿದ್ದೇವೆ ಎಂದು ನುಡಿಯುತ್ತಾರೆ. ನಮ್ಮ ನಿವೇಶನವನ್ನು ಪುರಸಭೆ ಅವರು ಅಳತೆ ಮಾಡಿ ಗುರುತಿಸಿರುತ್ತಾರೆ, ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ಪುರಸಭೆಯವರು ಬಂದು ಎಂದಿಗೂ ನಮ್ಮ ನಿವೇಶನವನ್ನು ಅಳತೆ ಮಾಡಿ ತೋರಿಸಿ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನಾವು ಪ್ರತಿವಾದಿಗೆ ಸೇರಿದ ಆಸ್ತಿಯಲ್ಲಿ ಅಕ್ರಮವಾಗಿ ಸ್ವಾಧೀನದಲ್ಲಿದ್ದೇನೆ ಅಂದರೆ ಸರಿಯಲ್ಲ.

ನಿಪಿ-1 ಮತ್ತು 2 ರಲ್ಲಿ ನಮೂದಿಸಿರುವ ಆಸ್ತಿಗಳು ಪ್ರತಿವಾದಿಗಳ ಆಸ್ತಿಯ ಪಕ್ಕದಲ್ಲಿ ಇಲ್ಲ ಅಂದರೆ ಸರಿಯಲ್ಲ. ನಿಪಿ-3 ನ್ನು ಶಶಿಶೇಖರ್ ಅವರೊಂದಿಗೆ ಸೇರಿ ಸೃಷ್ಠಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ನಿಪಿ-5 ರಿಂದ ನಿಪಿ-7 ರಲ್ಲಿರುವ ಎಲ್ಲಾ ಆಸ್ತಿಗಳು ನಿವೇಶನ ಸದಖ್ಯೆ.20 ಕ್ಕೆ ಸಂಬಂಧಿಸಿದವುಗಳು ಅಂದರೆ, ಸಾಕ್ಷಿಯು ನಾವು ಖರೀದಿಸಿದ ನಿವೇಶನಕ್ಕೆ ಸಂಬಂಧಿಸಿದವು ಎಂದು ನುಡಿಯುತ್ತಾರೆ. ನಿಪಿ-8 ರಿಂದ ನಿಪಿ-13 ನಿವೇಶನ ಸಂಖ್ಯೆ.20 ಕ್ಕೆ ಸಂಬಂಧಿಸಿದವುಗಳಲ್ಲ ಅಂದರೆ ಸರಿಯಲ್ಲ. ದಾವೆಗಾಗಿ ಎಲ್ಲಾ ದಾಖಲೆಗಳನ್ನು ಸೃಷ್ಠಿಸಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲ. ನಿಪಿ-16 ರಿಂದ ನಿಪಿ-39 ರ ದಾಖಲೆಗಳು ನಿವೇಶನ ಸಂಖ್ಯೆ.20 ಕ್ಕೆ ಸಂಬಂಧಿಸಿದವುಗಳು ಅಂದರೆ, ಸಾಕ್ಷಿಯು ನಾನು ಇರುವ ಮನೆಯ ದಾಖಲೆಗಳನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು, ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರ:ದ:ನ್ಯಾ:ದಂ.,ರವರು, ಕಡೂರು.